ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂಖ್ಯೆಃ ಸಿಬ್ಬಂದಿ-1/ವಿಚಾರಣೆ-1/32/2014-15

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ ಬೆಂಗಳೂರು-1
ದಿನಾಂಕಃ30-03-2015.

## ನಿಯಮ 12 ರಡಿ ಕಾರಣ ಕೇಳುವ ಸೂಚನಾ ಪತ್ರ

**ವಿಷಯಃ** ಕೊಪ್ಪಳ ಜಿಲ್ಲೆಯಲ್ಲಿ 2013-14 ನೇ ಸಾಲಿನ ಕೃಷಿ ಯಾಂತ್ರೀಕರಣ ಯೋಜನೆಯಡಿ ಕಂಬೈನ್ಡ್ ಹಾರವೆಸ್ಟರ್‌ಗಳಿಗೆ 2014-15ನೇ ಸಾಲಿನಲ್ಲಿ ಸಹಾಯಧನ ಪಾವತಿಸಿರುವ ಬಗ್ಗೆ.

**ಉಲ್ಲೇಖಃ** ಮಾನ್ಯ ಶಾಸಕರು, ಮಾಯಕೊಂಡ ಕ್ಷೇತ್ರ, ದಾವಣಗೆರೆ ಇವರು ನೀಡಿರುವ ಕೊಪ್ಪಳ ಜಿಲ್ಲೆಯ 2013-14 ನೇ ಸಾಲಿನ ಕೃಷಿ ಯಾಂತ್ರೀಕರಣ ಯೋಜನೆಯಡಿ ಕಂಬೈನ್ಡ್ ಹಾರವೆಸ್ಟರ್‌ಗಳಿಗೆ 2014-15ನೇ ಸಾಲಿನಲ್ಲಿ ಸಹಾಯಧನ ನೀಡಿರುವ ಪಟ್ಟಿ

**********

ದಿನಾಂಕ 27-3-2015 ರಂದು ಸುಮಾರು ಸಂಜೆ 6-30 ಘಂಟೆಗೆ ಮಾನ್ಯ ಶಾಸಕರು, ಮಾಯಕೊಂಡ ಕ್ಷೇತ್ರ, ದಾವಣಗೆರೆ ಇವರು ಕೃಷಿ ಆಯುಕ್ತರು, ಬೆಂಗಳೂರು ಇವರನ್ನು ಭೇಟಿ ಮಾಡಿ 2013-14 ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಸುಮಾರು 37 ಕಂಬೈನ್ಡ್ ಹಾರವೆಸ್ಟರ್‌ಗಳನ್ನು ರೈತರು ಬ್ಯಾಂಕ್ ಸಾಲದ ಮೂಲಕ ಖರೀದಿಸಿದ್ದು, ಸದರಿ ಕಂಬೈನ್ಡ್ ಹಾರವೆಸ್ಟರ್‌ಗಳಿಗೆ ಸಹಾಯಧನ ರೂ.148.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಸದರಿ ಕಂಬೈನ್ಡ್ ಹಾರವೆಸ್ಟರ್‌ಗಳಿಗೆ ಇಲಾಖೆಯ ಮಾರ್ಗಸೂಚಿಗಳನ್ವಯ ಹಾಗೂ ಇಲಾಖೆಯ ಪೂರ್ವಾನುಮತಿ ಪಡೆಯದೆ ಖರೀದಿಸಿರುವುದರಿಂದ, ಸಹಾಯಧನ ನೀಡಲು ಬರುವುದಿಲ್ಲವೆಂದೂ ಸೂಚಿಸಲಾಗಿ, ಮಾನ್ಯ ಶಾಸಕರು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿಗೆ ಸಂಬಂಧಪಟ್ಟ 18 ಫಲಾನುಭವಿಗಳಿಗೆ ಇಲಾಖೆಯ ಪೂರ್ವಾನುಮತಿ ಪಡೆಯದೆ 2014-15 ನೇ ಸಾಲಿಗೆ ಸರ್ಕಾರಿ ಸಹಾಯಧನ ಬಿಡುಗಡೆ ಮಾಡಲಾಗಿರುತ್ತದೆ ಎಂದು ದಾಖಲೆಯ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ದಾಖಲೆಯ ಪಟ್ಟಿಯನ್ನು ಇದರೊಂದಿಗೆ ಕಳುಹಿಸಲಾಗಿದೆ.

ರೈತರಿಗೆ ಕೃಷಿ ಉಪಕರಣಗಳನ್ನು ನೀಡಲು 2013-14 ನೇ ಸಾಲಿನಲ್ಲಿ ಇರುವ **ಮಾರ್ಗಸೂಚಿಗಳು** ಈ ಕೆಳಕಂಡಂತೆ ಇರುತ್ತವೆ.

- ಕಂಡಿಕೆ -8ರಲ್ಲಿ ರೈತರು-ಸ್ವಸಹಾಯ ಗುಂಪುಗಳು ಪೂರ್ಣ ಮೊತ್ತವನ್ನು ಪಾವತಿಸಿ ಪಡೆಯಲಿಚ್ಚಿಸಿದ ಸವಲತ್ತನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಮುಖಾಂತರ ಸರಬರಾಜು ಮಾಡುವುದು. ಘಟಕ ಖರೀದಿಸುವ ಮುನ್ನ ಇಲಾಖೆಗೆ ಅರ್ಜಿ ನೀಡುವುದು ಕಡ್ಡಾಯ.
- ಕಂಡಿಕೆ-9ರಲ್ಲಿ ಸಹಾಯಧನದಡಿ ಸವಲತ್ತನ್ನು ಪಡೆಯಲಿಚ್ಛಿಸುವ ರೈತರು ನಿಗಧಿತ ನಮೂನೆಯಲ್ಲಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ರೈತ ಸಂಪರ್ಕ ಕೇಂದ್ರಕ್ಕೆ ಉಪಕರಣಗಳ/ಟಿಲ್ಲರ್‌ಗಳ ಮಾದರಿಯನ್ನು ನಮೂದಿಸಿ, ಅರ್ಜಿ ಸಲ್ಲಿಸುವುದು. ರೈತ ಸಂಪರ್ಕ ಕೇಂದ್ರದ ಮುಖ್ಯಸ್ಥರ ಶಿಪಾರಸ್ಸಿನೊಂದಿಗೆ ಅರ್ಜಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು.
- ಕಂಡಿಕೆ-15 ರಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ನಿರ್ವಹಿಸುವ ಜೇಷ್ಠತಾ ಪಟ್ಟಿ ಹಾಗೂ ಅನುದಾನ ಲಭ್ಯತೆ ಆಧಾರದ ಮೇಲೆ ಮೊದಲು ಬಂದವರಿಗೆ ಆದ್ಯತೆ ಮೇರೆಗೆ ಸಹಾಯಧನ ಪಾವತಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವುದು ಹಾಗೂ ಸರ್ಕಾರದ ಸುತ್ತೋಲೆಯಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ಮಹಿಳೆಯವರಿಗೆ ಆದ್ಯತೆ ನೀಡುವುದು ಎಂದು ಸೂಚಿಸಲಾಗಿರುತ್ತದೆ.

ಮೇಲ್ಕಂಡ ಮಾರ್ಗಸೂಚಿಗಳು ಸ್ಪಷ್ಟವಾಗಿದ್ದರೂ ಸಹ ನೀವು ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿ, ಹಾಗೂ ಇಲಾಖೆಯ ಪೂರ್ವಾನುಮತಿ ಪಡೆಯದೆ, ನಿಯಮಬಾಹಿರವಾಗಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ 18 ಫಲಾನುಭವಿಗಳಿಗೆ 2013-14 ನೇ ಸಾಲಿನ ಸರ್ಕಾರಿ ಸಹಾಯಧನವನ್ನು 2014-15 ನೇ ಸಾಲಿಗೆ ಬಿಡುಗಡೆ ಮಾಡಿರುವುದು ತಿಳಿದು ಬಂದಿರುತ್ತದೆ.

ಈ ರೀತಿ ನಿಮ್ಮ ವರ್ತನೆಯು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ರ ನಿಮಯ 3 ನ್ನು ಉಲ್ಲಂಘಿಸಿರುತ್ತೀರಿ. ಈ ರೀತಿಯ ನಿಮ್ಮ ವರ್ತನೆಯ ಬಗ್ಗೆ ನಿಮ್ಮನ್ನು ನಿಲಂಬನೆಯಲ್ಲಿಡಲು ಸರ್ಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು? ಎಂಬುದಕ್ಕೆ ನಿಮ್ಮ ಸ್ಪಷ್ಟವಾದ ಲಿಖಿತ ಸಮಜಾಯಿಷಿಯನ್ನು ಈ ಕಾರಣ ಕೇಳುವ ಸೂಚನಾ ಪತ್ರ ~~ತಲುಪಿದ~~ ದಿನಾಂದಿಂದ ಮೂರು ದಿನಗಳ ಒಳಗಾಗಿ ಇಲಾಖೆಗೆ ಸಲ್ಲಿಸಲು ಸೂಚಿಸಿದೆ.

30.3.15

ಕೃಷಿ ಆಯುಕ್ತರು.

ಇವರಿಗೆಃ-

ಶ್ರೀ ವೀರೇಶ್ ಹುನಗುಂದ,
ಪ್ರಭಾರ ಜಂಟಿ ಕೃಷಿ ನಿರ್ದೇಶಕರು,
ಕೊಪ್ಪಳ ಜಿಲ್ಲೆ
ಕೊಪ್ಪಳ